**ಜಲಗಾರ (1928)**

'ಮೋಡಣ್ಣನ ತಮ್ಮ' ಎಂಬ ಮಕ್ಕಳ ಗೀತನಾಟಕವನ್ನು ಹೊರತು ಪಡಿಸಿದರೆ, ಇದು ಕುವೆಂಪು ಅವರ ಮೊದಲ ನಾಟಕ. ಕೇವಲ ನಾಲ್ಕು ದಿನಗಳ ಅವಧಿಯಲ್ಲಿ 'ಜಲಗಾರ', 'ಯಮನಸೋಲು' ಮತ್ತು 'ಮಹಾರಾತ್ರಿ' ನಾಟಕಗಳು ರಚಿತವಾಗಿದ್ದವು. ನವೀನ ರೀತಿಯ ವಸ್ತು, ಛಂದಸ್ಸು ಪ್ರಸ್ತುತಿಯಿಂದ ಅತ್ಯಂತ ಗಮನಸೆಳೆದ ನಾಟಕವಿದು. ಕೇವಲ ಎರಡು ದೃಶ್ಯಗಳ ಈ ನಾಟಕ ಕನ್ನಡ ನಾಟಕ ಸಾಹಿತ್ಯದ ಆಲೋಚನೆ, ಅಭಿವ್ಯಕ್ತಿ ಮತ್ತು ದಿಕ್ಕು ದೆಸೆಗಳನ್ನೇ ಬದಲಾಯಿಸಿತ್ತು. ಅಸ್ಪೃಶ್ಯತೆ, ಪುರೋಹಿತಾಶಾಹಿ ಇವುಗಳ ವಿರುದ್ಧ ಕವಿ ಹಲವಾರು ಪ್ರಶ್ನೆಗಳನ್ನು ಎತ್ತುವ ಮೂಲ ವಾಚಕ-ನೋಡುಗರನ್ನು ಚಿಂತನೆಗೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ದೇವರು ಗುಡಿಯಲ್ಲಿಲ್ಲ, ನಮ್ಮೊಳಗೇ ಇದ್ದಾನೆ ಎಂಬುದನ್ನು 'ಜಲಗಾರ' ಸಾಧಿಸಿ ತೋರಿಸುತ್ತದೆ.

1928ರಲ್ಲಿ ರಚಿತವಾದ ಈ ನಾಟಕ ಮೊದಲು ಪ್ರಕಟಗೊಂಡಿದ್ದು 1931ರಲ್ಲಿ, 'ಯಮನಸೋಲು' ಮತ್ತು 'ಶ್ಮಶಾನ ಕುರುಕ್ಷೇತ್ರಂ' ನಾಟಕಗಳನ್ನೊಳಗೊಂಡ 'ಮೂರು ನಾಟಕಗಳು' ಸಂಕಲನದಲ್ಲಿ. ಪ್ರಕಾಶಕರು - ರಾಮಮೋಹನ ಕಂಪೆನಿ, ಬೆಂಗಳೂರು. ಬೇರ ಬೇರೆ ಮುದ್ರಣಗಳ ವಿವರ ಕೆಳಕಂಡಂತಿದೆ.

| | | |
|---|---|---|
| ಮೂರುನಾಟಕಗಳು ಸಂಕಲನದ ಆವೃತ್ತಿಗಳು | : | 1931, 1942, 1946 |
| ಕಾವ್ಯಾಲಯ, ಶಿವಮೊಗ್ಗ ಇವರಿಂದ ಬಿಡಿ ಆವೃತ್ತಿ | : | 1936, 1944 |
| ಉದಯರವಿ ಮೈಸೂರು ಇವರಿಂದ ಬಿಡಿ ಆವೃತ್ತಿ | : | 1962, 1969, 1973, 1984, 1989, 1997, 2002 |
| 'ಶೂದ್ರತಪಸ್ವಿ'ಯೊಂದಿಗೆ | : | 2004 |
| ಕುವೆಂಪು ಸಮಗ್ರನಾಟಕದ ಭಾಗವಾಗಿ | : | 2004 (ಹಂಪಿ ಕನ್ನಡ ವಿಶ್ವವಿದ್ಯಾಲಯ) |
| ಕುವೆಂಪು ಸಮಗ್ರ ಸಾಹಿತ್ಯದ ಭಾಗವಾಗಿ | : | 2013 (ರಾಷ್ಟ್ರಕವಿ ಕುವೆಂಪು ಟ್ರಸ್ಟ್, ಕುಪ್ಪಳಿ) |

ಎನ್.ಎಸ್. ರಘುನಾಥ್ ಎಂಬುವವರು 'ಜಲಗಾರ' ನಾಟಕವನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಅದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ 2010ರಲ್ಲಿ 'THREE MORE PLAYS OF KUVEMPU' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ.

**ನಾಟಕದ ಪಾತ್ರಗಳು**

ಭೂದೇವಿ

ಶಿವ

ಜಲಗಾರ

ರೈತ

ಕಬ್ಬಿಗ

ಯುವಕ

ತಿರುಕ

ಭಟ್ಟ

ಬಾಲಕರು

ಹಳ್ಳಿಯ ಹುಡುಗಿ

ಇಬ್ಬರು ಪಾರ್ವರು

ಇಬ್ಬರು ತರುಣರು

